ತಾರೀಖು 2ನೇ ಜೂ॥ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—

ಸಂ॥ 1896—97ನೇ ಸಾಲಿಗೆ ಅಂದರೆ ಸಂ॥ 1896ನೇ ಇಸವಿ ಜುಲೈ 1ನೇ ತಾರೀಖು ಲಾಗಾಯತು ಸಂ॥ 1897ನೇ ಇಸವಿ ಜೂ॥ 30ನೇ ತಾರೀಖು ವರಿಗೆ ಬಾಜೂದಲ್ಲಿ ಕಂಡ ಗುಬ್ಬೀ ತಾಲ್ಲೂಕು ಗ್ರಾಮಗಳಲ್ಲಿರುವ ಮಿಸ್ಕ್ಕಾತ್ತು ಸಾಸ್ತಿಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಸರಕಾರಿ ಬಂಜರು ಜಮೀನುಗಳಲ್ಲಿಯೂ ಮತ್ತು ಬಾಜೂದಲ್ಲಿ ಕಂಡ ಅಮೃತಮಹಲ್ ಕಾವಲುಗಳಲ್ಲಿಯೂ ದೊರಿಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸುಗಳನ್ನ ಜವಾಯಿಸಿಕೊಳ್ಳುವ ಹಕ್ಕ್ಕುದಾರಿಯನ್ನ ಅಮಲ್ದಾರ್ರವರ ರೂಬರೂ 1896ನೇ ಇಸವಿ ಜುಲೈ ತಾರೀಖು 8ರಲ್ಲಾ ಗುಬ್ಬೀ ತಾಲ್ಲೂಕು ಕಚೇರಿಯಲ್ಲಿ ಹರಾಜ್ ಮಾಡಲ್ಪಡುತ್ತೆ. ಹರಾಜು ಮಧ್ಯಾನ್ನ 12 ಘಂಟೆಗೆ ಪುರೂ ಆಗುತ್ತೆ. ಈ ಹರಾಜು ತುಮಕೂರು ಮಿಸ್ಕ್ಕಾತ್ತು ಪೈಮ್ಯಟಿ ಕಮ್ಮಿಷನರವರ ಮಂಜೂರಾತಿಗೆ ವಳಪಟ್ಟಿರುತ್ತೆ.

(1) ಹುಗಲವಾಡಿ ಸಮ್ಮತ್ತು ಹರಳಕೆರೆ ನಾಯಕನಕೆರೆ ವಗ್ಗೈರೆ
(2) ಹಾಗಲವಾಡಿ ಸಮ್ಮತ್ತು ಮಂಜಲಧೊರಫಿರ್ಕಾ ಗ್ರಾಮಗಳು
(3) ಚಿಟ್ಟನಹಳ್ಳಿ ಸಮ್ಮತ್ತು ಹರಳಕೆರೆ ವಗ್ಗೈರೆ ಗ್ರಾಮಗಳು
(4) ನಿಪ್ಪೂರು ಸಮ್ಮತ್ತು ಕೊಂಡ್ಲಿ ಫಿರಕಾ ಕರಡಿಕಲ್ಲು ವಗ್ಗೈರೆ ಗ್ರಾಮಗಳು
(5) ಜೇಳೂರು ಸಮ್ಮತ್ತು ಹುವ್ವಿನ ಕಟ್ಟನಲ್ಲಿರುವ ವಗ್ಗೈರೆ ಗ್ರಾಮಗಳು

ಅಮೃತಮಹಲ್ ಕಾವಲುಗಳು.

(1) ಗುಬ್ಬೀ ಸಮ್ಮತ್ತು ಬೆಕ್ಕೆಗುಡ್ಡದ ಕಾವಲು
(2) ಡಿಟೋ ಬನ್ನಕಟ್ಟೆ ಕಾವಲು
(3) ಡಿಟೋ ಗುಬ್ಬೀ ಅಮಾನೀಕೆರೆ ವಳಗೆರೆ ಕಾವಲು
(4) ಡಿಟೋ ಚಿಟ್ಟನಹಳ್ಳಿ ಸಮ್ಮತ್ತು ನಾಗೇಗವ್ಹಡನಬ್ಯಾಲ ಕೆಂಜೇಗವ್ಹಡನ ಬ್ಯಾಲ
(5) ಡಿಟೋ ಹಿಂಡಿಸಿಗೆರೆ ಕಾವಲು
(6) ಡಿಟೋ ಚಿಟ್ಟನಹಳ್ಳಿ ವಳಗೆರೆ ಕಾವಲು
(7) ಡಿಟೋ ಕಾಡಾಲದ ಗಿಡದ ಕಾವಲು
(8) ಡಿಟೋ ಇಡಗೂರುಕೆರೆ ಹಿಂದಣ ಕಗ್ಗಲಿ ಕಾವಲು
(9) ಹಾಗಲವಾಡಿ ಸಮ್ಮತ್ತು ಯರೆ ಕಾವಲು
(10) ಕಲ್ಲೂರು ಮೂಗಣಿ ಬನವಸಾಗರದ ಕಾವಲು
(11) ಡಿಟೋ ಕಲ್ಲೂರುಕೆರೆ ಹಿಂದಣ ಜಾಲಿ ಕಾವಲು
(12) ನಿಪ್ಪೂರು ಮೂಗಣಿ ಬಿದರಹಳ್ಳಿ ಕಾವಲು
(13) ಡಿಟೋ ಈಚಲು ಕಾವಲು
(14) ದಂಡಿನಶಿವರದ ಮೂಗಣಿ ಸೂಗೆಹಳ್ಳಿಕೆರೆ ಕಾವಲು
(15) ಕಡಬ ಮೂಗಣಿ ಕಡಬ ವಳಗೆರೆ ಕಾವಲು
(16) ಜೇಳೂರು ಮೂಗಣಿ

(1) ಅಳಲೇಕಾಯಿ
(2) ತಾರೇಕಾಯಿ
(3) ದಿಂಡಗದಗೋಂದು
(4) ಕಪಿಲಾರಂಗು
(5) ಪತಂಗ
(6) ಹೊಂಗೇಬೀಜ
(7) ಗೇರುಬೀಜ
(8) ಆವರಿಕೆ ಗೋಂದು
(9) ಬ್ಯಾಲದಪಣ್ಣು ಮುಂತಾದ್ದು

2. ಪಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್ದಾರ್ರಿಂದ ಪಡಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ ಒಂದಕ್ಕೆ 1 ಆಣೆಯಂತೆ ಲೋಕಲ್‌ಸೆಸ್ ವಸೂಲ್ಮಾಡಲ್ಪಡುವದು.

3. ಕ್ಲಿಪ್ತ ಕಾಲಪವಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ತೇವಣಾತಿ ಇಟ್ಟ ಮೊಬಲಗು ಸರಕಾರತ್ತೆ ಕೇಂಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ಅವ್ವಲೆ ದರಖಾಸ್ತುದಾರನ ಲುಕ್ಸಾನಿಗೆ ವಳಪಡಿಸಿ ಪುನಃ ಹರಾಜು ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ಪೊಂಟಾಗುವ ಘಾಯಿದೆ ಭಾಗ ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಕೂಡದು.

5. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸುಗಳಲ್ಲಿ ಆಗಿರುವದಿಲ್ಲ.

ಪಿ. ವೆಂಕಟರಾವ್,
ಫಾರ್ ಆ॥ ಡೆಪ್ಯೂಟಿ ಕಮ್ಮಿಷನರ.

ಮೈಸೂರ್ ಜೈಲ್.

ಇಸ್ತಿಹಾರ್‌ನಾವಾ.

ತಾರೀಖು 1ನೇ ಜೂ॥ ಸಂ॥ 1896ನೇ ಇಸವಿ.

ಸಂ॥ 1896ನೇ ಇಸವಿ ಜುಲೈ 1ರ ಲಾಗಾಯತು ಸಂ॥ 1897ನೇ ಇಸವಿ ಜೂ॥ 30ರ ವರಿಗೆ, ಆ ಎರಡು ದಿವಸಗಳೂ ಸೇರಿ, ಮೈಸೂರು ಜೈಲಿನ ಖೈದಿಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ಸರಕುಗಳನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವುದಕ್ಕಾಗಿ ದರಖಾಸ್ತುಗಳನ್ನು ಕವರಿನಲ್ಲಿ ಹಾಕಿ ಮೊಹರು ಮಾಡಿ ಕೊಡತಕ್ಕದ್ದೆಂತಲೂ, ಸಂ॥ 1896ನೇ ಇಸವಿ ಜೂ॥ 22ನೇ ಸೋಮವಾರ ಹಗಲು 10 ಘಂಟೆಯವರಿಗೆ ಮೈಸೂರು ಜೈಲ್ ಸೂಪರಿಂಟೆಂಡೆಂಟರು ಅಂಥಾ ದರಖಾಸ್ತುಗಳನ್ನು ತೆಗದುಕೊಳ್ಳುವರೆಂತಲೂ ಇದರಿಂದ ಫಾಯಿಸ್ ಮಾಡಿದೆ.

2. ಮೇಲಕಂಡ ತಾರೀಖಾದ ತರುವಾಯ ಯಾವ ದರಖಾಸ್ತುಗಳನ್ನೂ ಹಿಡಿಯುವದಿಲ್ಲ.

3. ದರಖಾಸ್ತಿನ ಕವರಿನ ಮೇಲ್ಭಾಗದಲ್ಲಿ ಬರೆದಿರಬೇಕಾದ ಮೇಲ್ವಿಚಾರವೇನೆಂದರೆ,

"I. ಧಾನ್ಯದ ಸರಬರಾಯಿ ದರಖಾಸ್ತು"

"II. ಕಾರದ ಸಾಮಾನು ಸರಬರಾಯಿ ದರಖಾಸ್ತು"

"III. ಇತರ ಬೇಕಾದ ಸಾಮಾನುಗಳ ಸರಬರಾಯಿ ದರಖಾಸ್ತು"

"IV. ಕುರಿ ಮಾಂಸದ ಸರಬರಾಯಿ ದರಖಾಸ್ತು"

4. ಧಾನ್ಯದ ಸರಬರಾಯಿಗೆ 200 ರೂಪಾಯಿ, ಕಾರದ ಸಾಮಾನಿನ ಸರಬರಾಯಿಗೆ 100 ರೂಪಾಯಿ, ಇತರ ಬೇಕಾದ ಸಾಮಾನುಗಳ ಸರಬರಾಯಿಗೆ 100 ರೂಪಾಯಿ, ಕುರಿ ಮಾಂಸದ ಸರಬರಾಯಿಗೆ 75 ರೂಪಾಯಿ, ಈ ಮೇರೆ ನಗದಾಗಿಯಾಗಲಿ ಕರೆನ್ಸೀ ನೋಟಿನ ಮೂಲಕವಾಗಿಯಾಗಲಿ ಕೇವಸಾತಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನ್ನು ಹಿಡಿಯುವುದಿಲ್ಲ.

5. ಮೈಸೂರು ಜೈಲ್ ಸೂಪರಿಂಟೆಂಡೆಂಟರವರು ಮೇಲೆ ನಮೂದಾದ ತಾರೀಖು ಮತ್ತು ಹೊತ್ತಿನಲ್ಲಿ ಹಾಜರಾಗುವದಕ್ಕೆ ಇಷ್ಟವುಳ್ಳವರಾದ ದರಖಾಸ್ತುದಾರರ ರೂಬರೂ ಸದರಿ ದರಖಾಸ್ತುಗಳನ್ನು ತಪ್ಪದೆ ಆಫೀಸಿನಲ್ಲಿ ಒಡೆಯುವರು.

6. ಈ ಕೆಳಗೆ ನಮೂದಿಸುವ ಪದಾರ್ಥಗಳನ್ನು ಒಂದು ರೂಪಾಯಿಗೆ ಇಷ್ಟು ಪೌಂಡು ತೂಕದ ಮೇರೆ ಸರಬರಾಯಿ ಮಾಡಲಾಧೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರವು ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಪದಾರ್ಥಗಳೆಲ್ಲಾ ಒಳ್ಳೇದಾಗಿಯೂ ಇರತಕ್ಕದ್ದು.

ಸಂವತ್ಸರಕ್ಕೆ ಬೇಕಾದ ಪದಾರ್ಥಗಳ ಪಟ್ಟಿ.

		ಬೇಕಾಗುವ ಪದಾರ್ಥದ ಪರಮಾಣ.	
ನಂಬರ I ಧಾನ್ಯ.	ಅಕ್ಕಿ	24,550	ಪೌಂಡುಗಳು,
	ರಾಗಿ	95,000	,,
	ತೊಗರಬ್ಯಾಳೆ	13,000	,,
	ಅವರೇಬ್ಯಾಳೆ	10,000	,,
ನಂಬರ II ಕಾರದ ಸಾಮಾನು.	ಮೆಣಸಿನಪುಡಿ	1,800	,,
	ಈರುಳ್ಳಿ	2,400	,,
	ಬೆಳ್ಳುಳ್ಳಿ	300	,,
	ಹುಣಸೇಹಣ್ಣು	2,400	,,
	ಉಪ್ಪು	3,500	,,
ನಂಬರ III ಇತರ ಬೇಕಾದ ಸಾಮಾನು.	ಮೊಸರು	10,400	,,
	ಬಳ್ಳೆಹಣ್ಣು	1,150	,,
	ತುಪ್ಪ	600	,,
	ತರಕಾರಿ	28,500	,,
	ಸವುದೆ	136,960	,,
	ಹಾಲು	800	,,
	ಸಕ್ಕರೆ	50	,,
	ಸೋಜಿ	30	,,
	ರೊಟ್ಟಿ	20	,,
ನಂಬರ IV. ಕುರಿ ಮಾಂಸ.	ಕುರಿ ಮಾಂಸ	7,400	,,

ಪದಾರ್ಥಗಳು ಮೇಲೆಕಂಡ ಪರಿಮಾಣದ ಮೇಲೆ ಇಷ್ಟಿಷ್ಟೇ ಆಗಬೇಕೆಂದು ಖಾತರಿ ಧೂವದೂ ದೊರೆಯುವದಿಲ್ಲ.

7. ಖೈದಿಗಳು ಬೀಸುವದಕ್ಕೆ ರಾಗಿಯನ್ನ ಕಂಟ್ರಾಕ್ಟರ ಸರಬರಾಯಿ ಮಾಡತಕ್ಕದ್ದು. ಅದನ್ನ ಹೆಸೇಹಿಟ್ಟಾಗಿಯೇ ಕೊಡತಕ್ಕದ್ದು.

ಸರಬರಾಯಿ ಮಾಡಲ್ಪಡುವ ಹೆಸೇಹಿಟ್ಟಿನ ಪರಮಾಣವನ್ನು ನೋಡಿಕೊಂಡು ರಾಗೀ ದರದಂತೆಯೇ ಹಣ ಕೊಡಲ್ಪಡುವುದು.

8. ಕಮ್ಮಿ ದರಖಾಸ್ತನ್ನಾಗಲಿ ಅಥವ ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿಕೊಳ್ಳುವ ಭಾಗದಲ್ಲಿ ಸೂಪರಿಂಟೆಂಡೆಂಟರವರು ಬದ್ಧರಾಗಿರುವುದಿಲ್ಲ. ಇವರು ಯಾವ ಕಾರಣವನ್ನೂ ಹೇಳದೆ ಯಾವ ದರಖಾಸ್ತನ್ನಾದರೂ ತಿರಸ್ಕರಿಸಬಹುದು.

9. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರರು ಹಾಜರ್ಮಾಡಿದ ಕೇವಜೀ ಮೊಬಲಗು ಇಟ್ಟುಕೊಳ್ಳಲ್ಪಡುವದು, ಮತ್ತು ಅವರ ದರಖಾಸ್ತು ಮಂಜೂರಾಗಿದೆಯೆಂದು ಅವರಿಗೆ ತಿಳಿಯ ಪಡಿಸಿದ ಒಂದು ವಾರದೊಳಗಾಗಿ ಅವರು ಕಂಟ್ರಾಕ್ಟು ಕರಾರನ್ನು ಬರೆದುಕೊಡದೇ ಹೋದರೂ ಸರಿಯೇ, ಅಥವ ಧಾನ್ಯಕ್ಕೆ 200 ರೂಪಾಯಿ, ಕಾರದ ಸಾಮಾನಿಗೆ 100 ರೂಪಾಯಿ, ಇತರ ಅವಶ್ಯಕವಾದ ಪದಾರ್ಥಗಳಿಗೆ 100 ರೂಪಾಯಿ, ಕುರಿ ಮಾಂಸಕ್ಕೆ 75 ರೂಪಾಯಿ, ಈ ಮೇರೆ ನಗದಾಗಿಯಾಗಲಿ, ಸುಕಾರೀ ಬಾಂಡುಗಳ ಮೂಲಕವಾಗಿದಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ, ಮೇಲೆ ಕಂಡ ಕೇವಜೀ ಮೊಬಲಗು ಸಿವಾಯಿ ಜಮೆಯಾಗಿ ತೆಗೆದು ಕೊಳ್ಳಲ್ಪಡುವದು.

10. ಕಂಟ್ರಾಕ್ಟರ ಯಾ ಇಜಾರೆದಾರರಿಗೆ ನಗದು ಹಣ ಮುಂಗಡವಾಗಿ ಪಾವತಿಯಾಗಲಾರದು. ಸಾಮಾನುಗಳನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಸೂಪರಿಂಟೆಂಡೆಂಟರವರು ಪ್ರತಿ ತಿಂಗಳ ಗುರ್ತೇ ತಾರೀಖಾದ ತರುವಾಯ ಪಾವತಿ ಮಾಡುವರು.

11. ಸ್ಟೋರ್ ರೂಂನ ಎಂಬ ಉಗ್ರಾಣವು ಇಜಾರೆದಾರರ ವಶಕ್ಕೆ ಬಿಟ್ಟು ಕೊಡಲ್ಪಡುವದು. ಅವರು ಅದರಲ್ಲಿ ನಾಶವಾಗದೆ ಇರತಕ್ಕ ಪದಾರ್ಥಗಳನ್ನು ಇಷ್ಟುಕೊಳ್ಳಬಹುದು. ಯಾವಾಗ್ಯೂ ಉಗ್ರಾಣದಲ್ಲಿ ಒಂದು ತಿಂಗಳ ಸಾಮಾನಿಗೆ ಕಡಮೆ ಇಲ್ಲದಂತೆ ತುಂಬಿಕೊಂಡಿರಬೇಕು. ನಾಶವಾಗತಕ್ಕ ಪದಾರ್ಥಗಳು ಎಂದರೆ ತರಕಾರಿ ವಗ್ಗೆರೆ ಪದಾರ್ಥಗಳು ಪ್ರತಿ ದಿನವೂ ಬೆಳಿಗಿನ 7 ಘಂಟೆಗೆ ಜೈಲಖಾನೆಯಲ್ಲಿರಬೇಕು.

12. ಈ ಕಂಟ್ರಾಕ್ಟನ್ನು ಷಕಮಿ ಇಜಾರೆಯಾಗಿ ಕೊಡಲ್ಪಡಕೂಡದು.

13. ಕಂಟ್ರಾಕ್ಟು ಷರತ್ತಿಗೆ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಪದಾರ್ಥಗಳನ್ನು ಸರಬರಾಯಿ ಮಾಡಿದರೂ ಸರಿಯೆ, ಜೈಲ್ ಸೂಪರ್‌ಟೆಂಡೆಂಟರವರು. ಮುನಾಸಬ್ ಅರಿತು 50 ರೂಪಾಯಿಗೆ ಹೆಚ್ಚದೆ ಜರಿಮಾನೆಯನ್ನು ವಸೂಲ್ ಮಾಡಬಹುದು; ಪದೇಪದೇ ಕರಾರಿಗೆ ತಪ್ಪಿಹೋದರೆ ಕಂಟ್ರಾಕ್ಟನ್ನು ರದ್ದು ಮಾಡಿ ನೆಕ್ಯೂರಿಟಿಯನ್ನು ಸರಕಾರಕ್ಕೆ ಮುಟ್ಟುಗೋಲಾಗಿ ಬೆಗೆದು ಕೊಳ್ಳಬಹುದು.

14. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂದರ್ಭಗಳೆಲ್ಲಲ್ಲಾ ಸದರ ಸೂಪರ್‌ಟೆಂಡೆಂಟರವರ ಫೈಸಲೇ ಅಖೈರ್ ಫೈಸಲಾಗಿರತಕ್ಕದ್ದು.

15. ಖೈದಿಗಳ ಉಪಯೋಗಕ್ಕೋಸ್ಕರ ಅವಶ್ಯವಾದ ತರಕಾರಿಯನ್ನಾಗಲಿ, ಹಾಲನ್ನಾಗಲಿ ಮತ್ತು ಇತರ ಕೋವದೆ ಫಸಲನ್ನಾಗಲಿ ಕಂಟ್ರಾಕ್ಟು ದರದಂತೆಯೇ ಜೈಲಿನಿಂದ ಖರೀದಿಗೆ ತೆಗೆದು ಕೊಳ್ಳಲು ಕಂಟ್ರಾಕ್ಟುದಾರನು ಬದ್ಧನಾಗಿರತಕ್ಕದ್ದು.

16. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರ್‌ಟೆಂಡೆಂಟರ ಅಭಿಪ್ರಾಯವನ್ನು ವಿಚಾರಿಸಿ ತಿಳಿದುಕೊಳ್ಳಬಹುದು.

17. ಈ ಕಂಟ್ರಾಕ್ಟುಗಳು ಮೈಸೂರು ಜೈಲ್ ಇನ್‌ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಬಳಪಟ್ಟು ಇರುವವು. ಇವರು ಎಲ್ಲಾ ದರಖಾಸ್ತುಗಳನ್ನೇ ಆಗಲಿ ಅಥವಾ ಯಾವ ಒಂದು ದರಖಾಸ್ತನ್ನೇ ಆಗಲಿ ತಿರಸ್ಕರಿಸತಕ್ಕ ಹಕ್ಕನ್ನು ಉಳಿಸಿ ಕೊಂಡಿರುವರು.

18. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗೆದುಕೊಂಡ ತರುವಾಯ ತಮ್ಮ ಕರಾರಿನಂತೆ ನಡೆಯಲು ಇಷ್ಟ ಪಡದಿದ್ದರೆ, ಕೊನೇ ಪಕ್ಷ ಒಂದು ತಿಂಗಳಿಗೆ ಮುಂಚಿತವಾಗಿಯಾದರೂ ನೋಟಿಸ್ ಕೊಡಬೇಕು, ಮತ್ತು ಅವರ ನೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟುಬಿಡಬೇಕು.

19. ಇಜಾರೆದಾರರು ತಪ್ಪಿ ಹೋಗುವದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನು ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನು ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನು ಇಜಾರೆದಾರರು ಸರ್ಕಾರಕ್ಕೆ ಭರ್ತೀ ಮಾಡಿಕೊಡಬೇಕು.

ವಿಚಾರ—ಮೇಲೆ ನಮೂದಾದ ಕಂಟ್ರಾಕುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯತಿಯೂ ದೊರೆಯಲಾರದು.

ಯಾವ ಒಬ್ಬನೇ ಒಬ್ಬ ಕಂಟ್ರಾಕ್ಟದಾರನಾದರೂ ಸರಿಯೇ ಒಟ್ಟು ಇಜಾರೆಗೆ ಜಾಮೀನ್ ತರ್ಕ 475 ರೂಪಾಯಿಗಳನ್ನು ಠೇವಣಿ ಕಟ್ಟುವದರ ಮೂಲಕ ಒಂದೇ ದರಖಾಸ್ತಿನಲ್ಲಿ ಎಲ್ಲಾ ಪದಾರ್ಥಗಳಿಗೂ ದರಖಾಸ್ತು ಕೊಡಬಹುದು.

ಟಿ. ವಿ. ಆರ್‌ಮುಗಂ,
ಮೈಸೂರು ಜೈಲ್ ಸೂಪ್ರೆಂಟೆಂಡೆಂಟ್.

ಹಾ ಸ ನ ಡಿ ಸ್ಟ್ರಿಕ್ಟು.

ತಾರೀಖು 26ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಂ 1896—97ನೇ ಸಾಲಿಗೆ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ಕಾರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನು ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಯಲ್ಲಿ ಬರುವ ಜುಲೈ 14ನೇ ತಾರೀಖಿನ ಬೆಳಿಗ್ಗೆ 11 ಘಂಟೆಗೆ ಹರಾಜು ಮೂಲಕ ವಿಲೇವಾರಿಯಾಗುತ್ತದೆ.

2. ಅಮಲ್‌ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುತ್ತಾರೆ.

3. ಜಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಬಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜ್ಯಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಜಡಸವಾಲ್‌ದಾರ್ರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡಬೇಕಲ್ಲದೆ ಹರಾಜ್ ಮಂಜೂರ್ ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಅಮಲ್‌ದಾರ್ರಿಂದ ಜಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸಗಳೊಳಗಾಗಿ ಜಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸಸ್ಸ್ ದೇಖೀಲ್ ಜಡಸವಾಲ್ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೇದಾರ್ರು ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಕಾರಂಗದ ಕಲ್ಲುಗಳನ್ನು ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತಾ ಹಿಡುವಳಿದಾರ್ರು ತಮ್ಮ ಜಮೀನುಗಳಲ್ಲಿರತಕ್ಕ ಕಾರಂಗದ ಕಲ್ಲುಗಳನ್ನು ತಾವೆ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರ್ರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರ್ರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಉಳ್ಳದ ಜಮೀನುಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರ ಪೇನೂ ಇರುವಾಹಿಲ್ಲ. ಪರಂತು ಅಂಥಾ ಜಮೀನುಗಳಲ್ಲಿ ಸಿಕ್ಕುವ ಕಾರಂಗದ ಕಲ್ಲುಗಳನ್ನು ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರ್ರು ಆಗಿಯಾಕೂಡದು. ಒಂದು ವೇಳೆ ಆಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಪ್ಪು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ವಿಷಯಗಳಿಗೆ ಸಂಬಂಧಪಟ್ಟ ಕಂಡು ಸಬ್ ತಾಲ್ಲೂಕು ಡೆಪ್ಯೂಟಿ ಅಮಲ್‌ದಾರ್ರಿಂದ ಒಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೆದಾರ್ರು ಸಾಗಿಸಕೂಡದು.

ಎ. ಕೃಷ್ಣಸ್ವಾಮಯ್ಯಂಗಾರ್ರು,
ಡೆಪ್ಯೂಟಿ ಕಮ್ಮಿಷನರ್.